# <u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>

**MVC 668-24** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 26.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ R N T, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

ಅಪಘಾತದ ಬಗ್ಗೆ ಪೋಲಿಸರಿಗೆ ಕೊಟ್ಟ ದೂರಿನ ದೃಢೀಕೃತ ನಕಲನ್ನು ನಿಪಿ.1 ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು, ಅಪರಾಧ ಸ್ಥಳದ ಪಂಚನಾಮೆಯನ್ನು ನಿಪಿ.3 ಎಂದು, Inquest ನ್ನು ನಿಪಿ.4 ಎಂದು, ಐ ಎಂ ವಿ ವರದಿ ನಿಪಿ.5 ಎಂದು, ಪಿ ಎಂ ವರದಿ ನಿಪಿ.6 ಎಂದು, ಪೋಲಿಸರು ಸಲ್ಲಿಸಿದ ಅಂತಿಮ ವರದಿಯನ್ನು ನಿಪಿ.7 ಎಂದು ಗುರುತಿಸಲಾಯಿತು.

ಮಂಜುನಾಥ ಮೈಲಾರಪ್ಪ ಮಾಡಳ್ಳಿ ರವರ ಆಧಾರ ಕಾರ್ಡ ನ್ನು ನಿಪಿ.8 ಎಂದು ಗುರುತಿಸಲಾಯಿತು.

ರುಕ್ಮೀಣಿ ಮಾಡಳ್ಳಿರವರ ಆಧಾರ ಕಾರ್ಡ ನ್ನು ನಿಪಿ.9 ಎಂದು ಗುರುತಿಸಲಾಯಿತು.

ಶೃತಿ ಮಂಜುನಾಥ ಮಾಡಳ್ಳಿರವರ ಆಧಾರ ಕಾರ್ಡ ನ್ನು ನಿಪಿ.10 ಎಂದು ಗುರುತಿಸಲಾಯಿತು.

ಸೃಷ್ಟಿ ಮಾಡಳ್ಳಿ ರವರ ಆಧಾರ ಕಾರ್ಡ ನ್ನು ನಿಪಿ.11 ಎಂದು ಗುರುತಿಸಲಾಯಿತು.

ಕಮಲವ್ವ ಬಾರಕೇರ ರವರ ಆಧಾರ ಕಾರ್ಡ ನ್ನು ನಿಪಿ.12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಒಂದನೇ ಎದುರುದಾರ ಪರ ಶ್ರೀ ಐ ಎಂ ಜೆ, ವಕೀಲರಿಂದಃ**

ನನ್ನ ಗಂಡ ತಿಂಗಳಿಗೆ 25 ಸಾವಿರ ರೂ. ದುಡಿಯುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಟಾಟಾ ಏಸ ವಾಹನದ ತಪ್ಪಿನಿಂದ ಅಪಘಾತ ವಾಗಿದೆ. ನನ್ನ ಗಂಡ ಸ್ಕಿಡ್ಡಾಗಿ ಬಿದ್ದು ಮರಣ ಹೊಂದಿದ್ದಾನೆ ಅಂದರೆ ಸರಿಯಲ್ಲ. ಬೈಕ್ ನನ್ನ ಗಂಡನದು. ನನ್ನ ಗಂಡನ ಡಿ ಎಲ್ ಹಾಜರಪಡಿಸಿಲ್ಲ. ಡಿ ಎಲ್ ಇರುವ ಬಗ್ಗೆ ಗೊತ್ತಿಲ್ಲ. ನನ್ನ ಗಂಡ ಡಿ ಎಲ್ ಇಲ್ಲದೆ ವಾಹನ ನಡೆಸಿದ್ದರಿಂದ ಪರಿಹಾರ ಕೊಡಲು ಎದುರುದಾರರು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ. ಪರಿಹಾರಗೋಸ್ಕರ ಸುಳ್ಳು ಕೇಸ ಹಾಕಿದ್ದೇವೆ ಅಂದರೆ ಸರಿಯಲ್ಲ. ಒಂದನೇ ಎದುರುದಾರನ ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಅಂದರೆ ಸರಿಯಲ್ಲ. ಪೋಲಿಸ ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೇನೆ.

**MVC 668-24** **PW : 1**

ಅಪಘಾತವು ನನ್ನ ಗಂಡನ ನಿಷ್ಕಾಳಜಿತನದಿಂದ ಆಗಿದ್ದರೂ ಸಹ ಪರಿಹಾರಗೋಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಎರಡನೇ ಎದುರುದಾರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಅವರ ಪರವಾಗಿ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.